ತಿರುಗಾಡುವುದು, ಬಟ್ಟೆಬರೆ, ಬಳೆ ಮುಂತಾದವುಗಳನ್ನು ಕೊಂಡುಕೊಳ್ಳಲು, ಒಮ್ಮೊಮ್ಮೆ ಸಿನಿಮಾ ನೋಡಲು ಪೇಟೆಗೆ ಹೋಗುವುದು ನೋಡಿ ಅವಳು ಅಸೂಯೆ ಪಡುತ್ತಿದ್ದಳು. ತನಗೆ ಬಟ್ಟೆಬರೆ ಬೇಕಿದ್ದರೆ ತಂದೆಯವರು ತಂದುಕೊಡುತ್ತಾರೆ. ತಾನೇ ಒಮ್ಮೆಯೂ ಪೇಟೆಯಿಂದ ಸೀರೆ ಕೊಂಡುತಂದದ್ದಿಲ್ಲ. ಸಮಯ ಸಿಕ್ಕಾಗಲೆಲ್ಲಾ ತನ್ನ ಆಕ್ರೋಶವನ್ನು ಅಬ್ದುಲ್ಲಾನ ಮುಂದೆ ತೋಡಿಕೊಳ್ಳುತ್ತಿದ್ದಳು.

ಅಬ್ದುಲ್ಲಾನಿಗೆ ಈ ಸಮಸ್ಯೆಯ ಅನುಭವವಿರಲಿಲ್ಲ. ಅವನ ತಾಯಿ ಮತ್ತು ಅಕ್ಕ ಎಲ್ಲೆಂದರಲ್ಲಿ ತಿರುಗಾಡಲು ಸ್ವತಂತ್ರರು. ತಿರುಗಾಡುವಾಗ ಬುರ್ಖಾ ಕೂಡ ಹಾಕುತ್ತಿರಲಿಲ್ಲ. ಅವರು ಗದ್ದೆಗಳಲ್ಲಿ ಕೂಲಿ ಮಾಡಿ ಗೆಯ್ದು ಬದುಕಬೇಕಾಗಿತ್ತು. ಈ ಸಂಪ್ರದಾಯಗಳ ಬೆನ್ನು ಹತ್ತಿ ಹೋದರೆ ಹೊಟ್ಟೆ ತುಂಬಲಾರದೆಂದು ಅವರಿಗೆ ತಿಳಿದಿತ್ತು. ಧರ್ಮಗ್ರಂಥಗಳನ್ನು ಓದಿದ ಅಬ್ದುಲ್ಲಾನಿಗೆ ತಿಳಿದಿತ್ತು ಈ ಸಂಪ್ರದಾಯಗಳನ್ನು ಪಾಲಿಸದೆ ಇದ್ದರೆ ಸತ್ತ ಮೇಲೆ ಪರಲೋಕದಲ್ಲಿ ದೇವರು ನರಕದ ಅಗ್ನಿಕುಂಡದಲ್ಲಿ ಹಾಕಿ ಶಿಕ್ಷಿಸುತ್ತಾನೆಂದು. ಆದರೆ ಹೊಟ್ಟೆಯ ಪಾಡು ಅದಕ್ಕಿಂತ ಮುಖ್ಯ ಮತ್ತು ಅನಿವಾರ್ಯವಾಗಿತ್ತು.

ಒಮ್ಮೆ ಸಲ್ಮಾ ಅಂದಿದ್ದಳು, 'ಈ ಸಂಪ್ರದಾಯಗಳೆಲ್ಲಾ ಗಂಡಸರು ಹಾಕಿದ ಸ್ವಾರ್ಥದ ಬೇಲಿ. ಹೆಣ್ಣಿಗೆ ಮಾತ್ರ ಯಾಕೆ ಈ ಕಠಿಣ ಸಂಪ್ರದಾಯ? ಗಂಡಿಗೆ ಯಾಕೆ ಇಲ್ಲ? ಹೆಣ್ಣನ್ನು ಗಂಡು ಬರೀ ಭೋಗದ ವಸ್ತುವೆಂದು ತಿಳಿದಿದ್ದರಿಂದ ಮಾತ್ರ ಹೀಗಾಗುತ್ತಿದೆ...'

ಅಬ್ದುಲ್ಲಾ ಕಟುವಾಗಿ ಈ ಪ್ರಶ್ನೆಗಳಿಗೆ ಧಾರ್ಮಿಕ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಉತ್ತರ ಕೊಡಲು ಸಮರ್ಥನಾಗಿದ್ದರೂ ಮನಸ್ಸು ಡೋಲಾಯಮಾನವಾಗುತ್ತಿತ್ತು ಮತ್ತು ಅವಳ ಮನಸ್ಸನ್ನು ನೋಯಿಸಲು ಕೂಡಾ ಹಿಂಜರಿಯುತ್ತಿದ್ದ.

'ನಮ್ಮ ಧರ್ಮ ಯಾವತ್ತೂ ಮಹಿಳೆಯ ಕಾರ್ಯಕ್ಷೇತ್ರವನ್ನು ಸಂಕುಚಿತಗೊಳಿಸಿಲ್ಲ. ಸ್ವಾತಂತ್ರ್ಯವನ್ನು ಮೊಟಕುಗೊಳಿಸಿಲ್ಲ. ಬದಲಿಗೆ ಅಂದಿನ ಕಾಲದಲ್ಲಿ ಮಹಿಳೆಯ ದಾಸ್ಯವಿಮೋಚನೆಗೆ ಮೈಲಿಗಲ್ಲಾಗಿತ್ತು ಗೊತ್ತಾ? ನಮ್ಮ ಜನರ ಸಂಕುಚಿತತೆಯಷ್ಟೇ ನಮ್ಮ ಮಹಿಳೆಯರನ್ನು ನಾಲ್ಕು ಗೋಡೆಯ ಬೇಲಿಯೊಳಗೆ ತುರುಕಿಸಿ ಮಾನಸಿಕ ಶಿಕ್ಷೆ ಕೊಡುತ್ತಿದೆ' ಎಂದು ಅಬ್ದುಲ್ಲಾ ಅವಳಿಗೆ ವಿವರಿಸಿ ಸಮಾಧಾನಪಡಿಸುತ್ತಿದ್ದ. ಅವಳ ಪ್ರಶ್ನೆಗಳಿಗೆ ಉತ್ತರಿಸುವಾಗ ನರಕ, ಸ್ವರ್ಗಗಳ ವಿಚಾರವನ್ನು ಎತ್ತಬಾರದೆಂಬ ಎಚ್ಚರಿಕೆ ವಹಿಸುತ್ತಿದ್ದ. ಅವಳಿಗೆ ಅದರಲ್ಲಿ ನಂಬಿಕೆ ಇಲ್ಲದೆ ಇರುವುದು ಅವನಿಗೆ ತಿಳಿದಿತ್ತು.

ಹೊರಗೆ ಕಪ್ಪೆಗಳು ವಟಗುಟ್ಟುತ್ತಿದ್ದುವು.

'ಮಳೆ ಬರುತ್ತದೆಯೋ ಏನೋ...!' ಎಂದ ಅಬ್ದುಲ್ಲಾ, ಸಲ್ಮಾಳನ್ನು ಮಾತಿಗೆಳೆಯಲು.

ಅವಳು ಮೌನವಾಗಿದ್ದಳು.

ಕೋಣೆಯ ಹೊರಗೆ ಯಾರೋ ನಡೆದಾಡಿದ ಶಬ್ದ. ಕೈಬಳೆಗಳ ಕಣಕಣ.

'ಯಾರೋ ನಿನ್ನನ್ನು ಕರೆಯುತ್ತಿರಬೇಕು... ನೋಡು' ಎಂದ.

ಸಲ್ಮಾ ಉದಾಸೀನಳಾಗಿ ಎದ್ದು ಹೊರ ಹೋದಳು.

ಅಬ್ದುಲ್ಲಾನಿಗೂ ಅಲ್ಲಿ ನಿಂತಿರಲಾಗಲಿಲ್ಲ. ಹೊರಗೆ ಹೋದ.

ಹತ್ತಿರದ ಕೋಣೆಯಲ್ಲಿ ಊಟದ ಮೇಜಿನ ಮೇಲೆ ಕೆಲಸದ ಹುಡುಗ ಊಟ ತಂದಿಟ್ಟಿದ್ದ.

ಖಾನ್ ಸಾಹೇಬರು ಅಬ್ದುಲ್ಲಾನನ್ನು ಊಟಕ್ಕೆ ಕರೆದುಕೊಂಡು ಹೋದರು.

ಖಾನ್ ಸಾಹೇಬರ ಜತೆ ಊಟ ಮಾಡುತ್ತಿರುವುದು ಅಬ್ದುಲ್ಲಾ ಇದೇ ಮೊದಲಬಾರಿ. ಘಮಘಮಮಿಸುವ ಪಲಾವ್ ಸರಿಯಾಗಿ ತಿನ್ನಲಾರದವನಾಗಿದ್ದ. ಮುದುಡಿ ಕುಳಿತು ಅರ್ಧ